ಅ) ತುರುವೇಕೆರೆ ತಾಲ್ಲೂಕಿನ ಎಷ್ಟು ಪ್ರೌಢಶಾಲೆಗಳಿಗೆ ಕಂಪ್ಯೂಟರ್ ಒದಗಿಸಲಾಗಿದೆ.

ಆ) ಆ ಶಾಲೆಗಳು ಯಾವುವು;

ಇ) ಎಷ್ಟು ಪ್ರೌಢಶಾಲೆಗಳಲ್ಲಿ ತರಬೇತಿ ಪ್ರಾರಂಭವಾಗಿದೆ;

ಈ) ದಬ್ಬೇಘಟ್ಟ ಪ್ರೌಢಶಾಲೆಗೆ ಕಂಪ್ಯೂಟರ್ ಮಂಜೂರಾತಿಯಾಗಿದ್ದರೂ ಈವರೆವಿಗೂ ಏಕೆ ಆಳವಡಿಸಿಲ್ಲ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

ಅ) 4 ಸರ್ಕಾರಿ ಪ್ರೌಢಶಾಲೆಗಳು

ಆ) ಅ) ಸರ್ಕಾರಿ ಪ್ರೌಢಶಾಲೆ, ದಂಡಿನಶಿವರ

ಆ) ಸರ್ಕಾರಿ ಪ್ರೌಢಶಾಲೆ, ದಬ್ಬೇಘಟ್ಟ

ಇ) ಸರ್ಕಾರಿ ಪ್ರೌಢಶಾಲೆ, ಕೂಡಗಿಹಳ್ಳಿ

ಈ) ಸರ್ಕಾರಿ ಪ್ರೌಢಶಾಲೆ, ಅಂಜಿಹಳ್ಳಿ ಮಾಯಾಸಂದ್ರ, ಹೋಬಳಿ

ಇ) 3 ಪ್ರೌಢಶಾಲೆಗಳು

ಈ) ದಬ್ಬೇಘಟ್ಟ ಪ್ರೌಢಶಾಲೆಗೆ ಕಂಪ್ಯೂಟರ್‌ಗಳನ್ನು ಆಳವಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ತುರುವೇಕೆರೆಯ ಪ್ರಥಮ ದರ್ಜೆ ಕಾಲೇಜಿನಲ್ಲಿ ಉಪನ್ಯಾಸಕರ ಕೊರತೆ

2575(3336) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) :— ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತುರುವೇಕೆರೆ ನಗರದ ಪ್ರಥಮ ದರ್ಜೆ ಕಾಲೇಜಿನಲ್ಲಿ ಉಪನ್ಯಾಸಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ, ಕೂಡಲೇ ಹುದ್ದೆಗಳ ಭರ್ತಿಗೆ ಸರ್ಕಾರ ತೆಗೆದುಕೊಡ ನಿಲುವೇನು?

ಡಾ: ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) :—

ಅ) ಬಂದಿದೆ

ಆ) ಈ ಕೊರತೆಯನ್ನು ಸಂಯುಕ್ತ ಪದವಿ ಕಾಲೇಜುಗಳನ್ನು ಬೇರ್ಪಡಿಸಿರುವ ಹಿನ್ನಲೆಯಲ್ಲಿ ಹೆಚ್ಚುವರಿಯಾದಂತಹ ಈ ಉಪನ್ಯಾಸಕರುಗಳನ್ನು ಅವರ ಹುದ್ದೆ ಸಮೇತ

ವರ್ಗಾಯಿಸುವ ಮೂಲಕ ಹಾಗೂ ಆರೆಕಾಲಿಕ ಉಪನ್ಯಾಸಕರುಗಳನ್ನು ನಿಯೋಜಿಸುವ ಮೂಲಕ ಕೊರತೆ ನೀಗಿಸಲು ಕ್ರಮಕೈಗೊಳ್ಳಲಾಗುವುದು.

ಉಚಗಾಂವ್ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಶಾಲೆಗಳಲ್ಲಿ ಮುಖ್ಯೋಪಾಧ್ಯಯರ ಹಾಗೂ ಸಹ ಶಿಕ್ಷಕರ ಹುದ್ದೆಗಳನ್ನು ತುಂಬುವುದು.

2576 (2973) ಶ್ರೀ ಮನೋಹರ್ ಪುನ್ನಪ್ಪ ಕಾಡೊಲ್ಕರ್ (ಉಚಗಾಂವ್) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಬೆಳಗಾವಿ ಜಿಲ್ಲೆ ಉಚಗಾಂವ್ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಶಾಲೆಗಳಲ್ಲಿ ಖಾಲಿ ಇರುವ ಮುಖ್ಯೋಪಾಧ್ಯಾಯರ ಹಾಗೂ ಸಹಶಿಕ್ಷಕರ ಹುದ್ದೆಗಳನ್ನು ತುಂಬಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ? ವಿವರ ನೀಡುವುದು;

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

1. ಪ್ರೌಢಶಾಲಾ ಮುಖ್ಯೋಪಾಧ್ಯಾಯರ ಹುದ್ದೆಗಳು ಮತ್ತು ಪ್ರೌಢಶಾಲಾ ಸಹಶಿಕ್ಷಕರ ಹುದ್ದೆಗಳು ಖಾಲಿ ಇರುವುದಿಲ್ಲ.

ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ ಮುಖ್ಯ ಶಿಕ್ಷಕರ ಹುದ್ದೆಗಳು

04 - ಕನ್ನಡ

26 - ಮರಾಠಿ

01 - ಉರ್ದು

ಖಾಲಿ ಇರುವ ಸಹಶಿಕ್ಷಕರ ಹುದ್ದೆಗಳು

36 - ಕನ್ನಡ

35 - ಮರಾಠಿ

02 - ಉರ್ದು

01 - ದೈಹಿಂಕ ಶಿಕ್ಷಕ

ಈ ಖಾಲಿಯಿರುವ ಮುಖ್ಯ ಶಿಕ್ಷಕರ ಹುದ್ದೆಗಳನ್ನು ಬಡ್ತಿ ಮೂಲಕ ಶಿಕ್ಷಕರ ಹುದ್ದೆಗಳನ್ನು ಹೆಚ್ಚುವರಿ ಶಿಕ್ಷಕರುಗಳನ್ನು ಸ್ಥಳಾಂತರಿಸುವ ಹಾಗೂ ನೇರ ನೇಮಕಾತಿ ಮೂಲಕ ತುಂಬಲು ಕ್ರಮ ತೆಗೆದುಕೊಳ್ಳಲಾಗುವುದು.